**CC. 1021/2019**
**PW-12**
**CW-16**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

ದಿನಾಂಕಃ 05/08/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ರುದ್ರಪ್ಪ ಗೌಡ |
| ತಂದೆ ಹೆಸರುಃ | ಲೇಟ್ ಸಣ್ಣ ಬೋರೇಗೌಡ |
| ವಯಸ್ಸುಃ | 62 ವರ್ಷ |
| ಉದ್ಯೋಗಃ | ನಿವೃತ್ತ ಎ ಎಸ್ ಐ |
| ವಾಸ ಸ್ಥಳಃ | ಕೆ ಆರ್ ನಗರ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ

ನಾನು 2014 ರಿಂದ 2018 ರವರೆಗೆ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 13.04.2017 ರಂದು ಸಂಜೆ 5.30 ಗಂಟೆಗೆ ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿರುವಾಗ ಶ್ರೀನಿವಾಸರವರು ಕುಶಾಲನಗರದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಿಕೊಂಡು ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ಅದನ್ನು ಸ್ವೀಕರಿಸಿಕೊಂಡು ಅಪರಾಧ ನಂ.108/2017 ರಲ್ಲಿ ಭಾರತ ದಂಡ ಸಂಹಿತೆಯ ಕಲಂ 504, 324, 323, 354(ಬಿ), 506, 427 ಸಹವಾಚಕ ಕಲಂ 34 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮತ್ತು ಹೇಳಿಕೆಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

3. ದಿಃ 14.04.2017 ರಂದು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಘಟನಾ ಸ್ಥಳವನ್ನು ಚಾಸಾ-4 ರವರು ತೋರಿಸಿಕೊಟ್ಟಂತೆ ಪಂಚರಾದ ಚಾಸಾ-7 ಮತ್ತು 8 ರವರ ಸಮಕ್ಷಮ ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆವರೆಗೆ ಮಹಜರನ್ನು ಸ್ಥಳದಲ್ಲಿ ಬರೆದಿರುತ್ತೇನೆ. ಆರೋಪಿಗಳು ಹೊಡೆದಿರುವ ದೊಣ್ಣೆ ಮತ್ತು ಎರಡು ಕಲ್ಲುಗಳನ್ನು ಚಾಸಾ–4 ಮಹಜರಿನ ಸಮಯದಲ್ಲಿ ಹಾಜರುಪಡಿಸಿರುತ್ತಾರೆ. ಸದರಿ ಮುದ್ದೇಮಾಲುಗಳನ್ನು ಅಮಾನತ್ತುಪಡಿಸಿಕೊಂಡು ಸ್ವತ್ತು ಪಟ್ಟಿ ನಂ.53/2017 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ–2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ದಿಃ 15.04.2017 ರಂದು ಚಾಸಾ–3, 5 ಮತ್ತು 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ–2 ಕಾಫಿ ಬಣ್ಣ ಮತ್ತು ಹಳದಿ ಮಿಶ್ರಿತ ಹೂಗಳಿರುವ ಒಂದು ನೈಟಿಯನ್ನು ಠಾಣೆಯಲ್ಲಿ ಹಾಜರುಪಡಿಸಿದ್ದು, ಅದನ್ನು ಚಾಸಾ11 ಮತ್ತು 12 ರವರ ಸಮಕ್ಷಮ ಮಹಜರಿನ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇನೆ. ಮಹಜರನ್ನು ಬೆಳಿಗ್ಗೆ 10.00 ಗಂಟೆಯಿಂದ 10.45 ರವರೆಗೆ ಬರೆದು ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಅಮಾನತ್ತುಪಡಿಸಿಕೊಂಡಿರುವ ಸದರಿ ನೈಟಿಯನ್ನು ಸ್ವತ್ತು ಪಟ್ಟಿ ನಂ. 53/2017 ರಲ್ಲಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ–17 ರವರಿಗೆ ಹಸ್ತಾಂತರಿಸಿರುತ್ತೇನೆ.

ನಿಪಿ–1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ಅದನ್ನು ನಿಪಿ–1 ಬಿ ಎಂದು ಗುರುತಿಸಲಾಯಿತು. ನಿಪಿ–3 ರಲ್ಲಿರುವ ತನ್ನ ಸಹಿಯನ್ನು

ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ಅದನ್ನು ನಿಪಿ–1 ಎ ಎಂದು ಗುರುತಿಸಲಾಯಿತು. ನಿಪಿ–4 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ಅದನ್ನು ನಿಪಿ-4 ಬಿ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ಪ್ರಥಮ ವರ್ತಮಾನ ವರದಿಯನ್ನು **ನಿ.ಪಿ.12** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.12(ಎ)** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಆರ್ ವಿ ವಕೀಲರಿಂದಃ</u>**

1. 1 ನೇ ಆರೋಪಿ ಚಾಸಾ–1 ರಿಂದ 4 ರವರ ವಿರುದ್ಧ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಚಾಸಾ–1 ಕೊಡಗು ಜಿಲ್ಲೆಯ ಶಿರಂಗಾಲ ಗ್ರಾಮದವರು ಎಂದರೆ ಗೊತ್ತಿಲ್ಲ. ಚಾಸಾ–1 ರವರು ಆಸ್ಪತ್ರೆಯಲ್ಲಿ ದಾಖಲಾಗಿರುವ ಬಗ್ಗೆ ನಾನು ಠಾಣೆಯಲ್ಲಿರುವಾಗ ಮಾಹಿತಿ ಬಂದಿರುತ್ತದೆ, ಶ್ರೀನಿವಾಸರವರನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ.

2. ಯಾವ ಕಾರಣಕ್ಕಾಗಿ ಜಗಳವಾಗಿರುತ್ತದೆ ಎಂದು ಗೊತ್ತಿಲ್ಲ. ಖಾಲಿ ನಿವೇಶನಕ್ಕೆ ಸಂಬಂಧಪಟ್ಟು ದೂರು ಮತ್ತು ಪ್ರತಿ ದೂರನ್ನು ಅನೇಕ ಬಾರಿ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ.

3. ನಾನು ಘಟನಾ ಸ್ಥಳದಲ್ಲಿ ಮಹಜರು ಮಾಡಿರುವುದಿಲ್ಲ ಮತ್ತು ಪೊಲೀಸ್ ಠಾಣೆ ಯಲ್ಲಿ ಮಹಜರು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು

ಚಾಸಾ-1 ರವರು ಸೇರಿ ಮುದ್ದೇಮಾಲುಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಪಡದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ15.04.2017 ರಂದು ಚಾಸಾ-2 ನೈಟಿಯನ್ನು ಹಾಜರುಪಡಿಸಿರುತ್ತಾರೆ. ಬಟ್ಟೆಯನ್ನು ಅಮಾನತ್ತುಪಡಿಸಿಕೊಂಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಅಮಾನತ್ತು ಮಹಜರಿನ ಸಾಕ್ಷಿದಾರರು ಯಾರ ಊರಿನವರು ಎಂದು ಈಗ ಹೇಳಲು ಸಾಧ್ಯವಿಲ್ಲ. ಅವರಿಗೆ ಲಿಖಿತವಾಗಿ ನೋಟೀಸನ್ನು ನೀಡಿರುತ್ತೇನೆ. ಪಿರ್ಯಾದುದಾರರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**